**ದಿನಾಂಕಃ 24.01.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಶ್ರೀ ಸಿ ಡಿ ಎ ವಕೀಲರಿಂದಃ-</u>**

ನಾನು ಗೃಹಿಣಿಯಾಗಿರುತ್ತೇನೆ. ನಮ್ಮದು ಒಟ್ಟು ಕುಟುಂಬ. ನಮ್ಮ ಕುಟುಂಬದಲ್ಲಿ ನಾನು, ನನ್ನ ಗಂಡ, ನನ್ನ ಮಗು, ನನ್ನ ಮಾವ, ನನ್ನ ಗಂಡನ ಅಕ್ಕ ಮತ್ತು ಭಾವ ಇರುತ್ತಾರೆ. ನನ್ನ ಗಂಡ ಅತಿಥಿ ಉಪನ್ಯಾಸಕರಾಗಿ ಕೆಲಸ ನಿರ್ವಹಿಸುತ್ತಿರುತ್ತಾರೆ. ಅವರಿಗೆ ಮಾಸಿಕ ರೂ. 10,000 ವೇತನ ಬರುತ್ತದೆ. ಅವರು ಸುಮಾರು 10-15 ವರ್ಷಗಳಿಂದ ಅತಿಥಿ ಉಪನ್ಯಾಸಕರಾಗಿ ಕೆಲಸ ನಿರ್ವಹಿಸುತ್ತಿರುತ್ತಾರೆ. ನಮ್ಮ ಕುಟುಂಬವನ್ನು ಹೇಗೆ ನಿರ್ವಹಿಸುತ್ತೀರಿ ಎಂಬ ಪ್ರಶ್ನೆಗೆ ಸಾಕ್ಷಿಯು ನಾವು ರೈತರಾಗಿದ್ದು ನಮಗೆ ಜಮೀನು ಇರುತ್ತದೆ ಎಂದು ನುಡಿಯತ್ತಾರೆ. ನಮ್ಮ ಕುಟುಂಬಕ್ಕೆ ಒಟ್ಟು 8 ಎಕರೆ ಜಮೀನು ಇರುತ್ತದೆ. ಸದರಿ ಜಮೀನಿನಲ್ಲಿ ಈರುಳ್ಳಿ, ಕಡಲೆ ಬೆಳೆ ಬೆಳೆಯುತ್ತೇವೆ ಮತ್ತು ಅಡಿಕೆ ಹಾಗೂ ತೆಂಗಿನ ತೋಟ ಇರುತ್ತದೆ. ಸದರಿ ಜಮೀನು ನನ್ನ ಮಾವನ ಹೆಸರಿನಲ್ಲಿರುತ್ತದೆ. ನನ್ನ ಮಾವನಿಗೆ ಇರುವ ಜಮೀನಿನ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. 2017 ರಲ್ಲಿ ನಾವು ಒಟ್ಟಿಗೆ ಇದ್ದು ಈಗ ನಾವು ವಿಭಾಗಮಾಡಿಕೊಂಡಿರುತ್ತೇವೆ.

ಕೃಷಿ ಮತ್ತು ನನ್ನ ಗಂಡನ ಆದಾಯ ಹೊರತುಪಡಿಸಿ ನನಗೆ ಬೇರೆ ಯಾವುದೇ ಆದಾಯದ ಮೂಲ ಇಲ್ಲಾ. ಕೃಷಿಯಿಂದ ನಮಗೆ ವಾರ್ಷಿಕ ಅಂದಾಜು 5 ರಿಂದ 6 ಲಕ್ಷ ಆದಾಯ ಬರುತ್ತಿತ್ತು. ಕೃಷಿಯ ಆದಾಯದಿಂದ ನಿಮಗೆ ಮತ್ತು ನಿಮ್ಮ ಗಂಡನಿಗೆ ಪಾಲು ನೀಡಿರುತ್ತಾರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಮ್ಮದು ಒಟ್ಟು ಕುಟುಂಬವಾಗಿತ್ತು ಎಂದು ನುಡಿಯುತ್ತಾರೆ. ಆರೋಪಿಯು ನನಗೆ ಸುಮಾರು 12-13 ವರ್ಷಗಳಿಂದ ಪರಿಚಯ. ಆರೋಪಿಯು ನನಗೆ ನನ್ನ ಗಂಡನ ಮೂಲಕ ಪರಿಚಯ. ಸಾಕ್ಷಿ ಮುಂದುವರೆದು ಆರೋಪಿಯು ನನ್ನ ಗಂಡನ ಸ್ನೇಹಿತನ ಸಹೋದರ ಎಂದು ನುಡಿಯುತ್ತಾರೆ. ಆರೋಪಿಯ ತಂದೆಯ ಹೆಸರು ಜಾತನಾಯ್ಕ. 2017 ರಲ್ಲಿ ಆರೋಪಿಯು ವ್ಯವಸಾಯ ಮಾಡುತ್ತಿದ್ದರು. ಆರೋಪಿಯ ಪೂರ್ಣ ಹೆಸರು ಹೇಮಂತನಾಯ್ಕ. ಆರೋಪಿಗೆ ನಾನು ಸಾಲ ನೀಡಿದ 15 ದಿನ ಪೂರ್ವದಲ್ಲಿ ನನ್ನ ಬಳಿ ಸಾಲ ನೀಡುವಂತೆ ಕೋರಿಕೊಂಡಿರುತ್ತಾರೆ. ಆರೋಪಿಯು ನೇರವಾಗಿ ನನ್ನ ಬಳಿ ಹಣವನ್ನು ಕೇಳಿರುತ್ತಾರೆ. ನಾನಾಗಲೀ ನನ್ನ ಗಂಡನಾಗಲೀ ಬಡ್ಡಿಗೆ ಹಣ ನೀಡುವುದಿಲ್ಲ. ರೂ. 4.00 ಲಕ್ಷ ಹಣ ದೊಡ್ಡ ಮೊತ್ತದ ಹಣ ಎಂದರೆ ಸರಿ. ಸಾಕ್ಷಿ ಮುಂದುವರೆದು ಆರೋಪಿಯು ಈ ಹಿಂದೆಯೂ ಸಹ ಸಾಲವನ್ನು ಪಡೆದು ವಾಪಸ್ಸು ನೀಡಿದ್ದರು ಎಂದು ನುಡಿಯುತ್ತಾರೆ. ಆರೋಪಿಯು ನಮ್ಮ ಬಳಿ ಈ ಹಿಂದೆ ಪಡೆದ ಸಾಲದ ಬಗ್ಗೆ ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ನಾನು ಹೇಳಿರುವುದಿಲ್ಲ.

ಆರೋಪಿಗೆ ದಿಃ 05.04.2017 ಕ್ಕೆ ಸಾಲ ನೀಡಿದ್ದು ಅದರ 15 ದಿನಗಳ ಹಿಂದೆ ಆರೋಪಿ ನನ್ನ ಬಳಿ ಸಾಲ ಕೇಳಿರುತ್ತಾರೆ, ನಿಖರವಾದ ದಿನಾಂಕ ನನಗೆ ನೆನಪಿಲ್ಲ. ಆರೋಪಿಗೆ ನಗದಾಗಿ ಹಣ ನೀಡಿರುತ್ತೇನೆ. ರೂ. 4.00 ಲಕ್ಷ ಹಣವನ್ನು ಎಲ್ಲಿಂದ ತಂದುಕೊಟ್ಟಿರಿ ಎಂಬ ಪ್ರಶ್ನೆಗೆ ಸಾಕ್ಷಿಯು ನಮ್ಮ ಮನೆಯಲ್ಲಿ ರೂ. 4.00 ಲಕ್ಷ ಹಣ ಇತ್ತು ಎಂದು ನುಡಿಯುತ್ತಾರೆ. ರೂ. 4.00 ಲಕ್ಷ ಹಣ ಯಾವ ಮೂಲದಿಂದ ಬಂತು

ಎಂಬ ಪ್ರಶ್ನೆಗೆ ಸಾಕ್ಷಿಯು ಅಡಿಕೆ ತೋಟದಿಂದ ಮತ್ತು ಕಡಲೆ ಬೆಳೆಯಿಂದ ಬಂದ ಆದಾಯದ ಹಣ ಎಂದು ನುಡಿಯುತ್ತಾರೆ. ಬೆಳೆಯನ್ನು ನಾನು ಮಾರಾಟ ಮಾಡಿರುವುದಿಲ್ಲ ನನ್ನ ಮಾವನವರು ಮಾರಾಟ ಮಾಡಿರುತ್ತಾರೆ. ಈ ಪ್ರಕರಣದಲ್ಲಿ ನನ್ನ ಮಾವನವರನ್ನು ಸಾಕ್ಷಿ ವಿಚಾರಣೆ ಮಾಡಲು ನಿಮಗೆ ತೊಂದರೆ ಇದೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ಅವರಿಗೆ 78 ವರ್ಷವಾಗಿದೆ ಸಾಕ್ಷಿ ಮಾಡಲು ತೊಂದರೆ ಇದೆ ಎಂದು ನುಡಿಯುತ್ತಾರೆ. ಆರೋಪಿಗೆ ಹಣವನ್ನು ನನ್ನ ಗಂಡನ ಸಮ್ಮುಖದಲ್ಲೇ ನಾನು ನೀಡಿರುತ್ತೇನೆ. ಆರೋಪಿಗೆ ಹಣವನ್ನು ನಮ್ಮ ಮನೆಯಲ್ಲಿ ನೀಡಿರುತ್ತೇನೆ. ಆರೋಪಿಗೆ ರೂ. 500 ಮತ್ತು 100 ರ ಮುಖಬೆಲೆಯ ನೋಟಿನ ಮೂಲಕ ಸಾಲವನ್ನು ನೀಡಿರುತ್ತೇನೆ. ನಾನು ಆರೋಪಿಗೆ ಸಾಲ ನೀಡಿರುವ ವಿಚಾರ ನಮ್ಮ ಒಟ್ಟು ಕುಟುಂಬದ ಎಲ್ಲಾ ಸದಸ್ಯರಿಗೂ ಗೊತ್ತು. ಆರೋಪಿಗೆ ಸಾಲವನ್ನು ನೀಡಿದ ಬಗ್ಗೆ ನಿಮ್ಮ ಕುಟುಂಬದ ಯಾವುದೇ ಸದಸ್ಯರನ್ನು ಸಾಕ್ಷಿ ವಿಚಾರಣೆ ಮಾಡಿಸಲು ನನಗೆ ತೊಂದರೆ ಇಲ್ಲಾ.

ಆರೋಪಿಯು ಚೆಕ್ಕಿನಲ್ಲಿ ದಿಃ 01.06.2017 ರ ದಿನಾಂಕವನ್ನು ನಮೂದಿಸಿ ನನಗೆ ನೀಡಿರುತ್ತಾರೆ. ಚೆಕ್ಕನ್ನು ನನ್ನ ಗಂಡನ ಸಮ್ಮುಖದಲ್ಲೇ ನನಗೆ ನೀಡಿರುತ್ತಾರೆ. ಚೆಕ್ ನಂಬರ್ ನನಗೆ ನೆನಪಿಲ್ಲ. ಆರೋಪಿ ನೀಡಿರುವ ಚೆಕ್ ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದಿಗೆ ಸಂಬಂಧಿಸಿರುತ್ತದೆ. ದಿಃ 21.06.2017 ರಂದು ನಿಪಿ-1 ರ ಚೆಕ್ಕನ್ನು ನಗದೀಕರಿಸಲು ಬ್ಯಾಂಕಿಗೆ ಹಾಜರುಪಡಿಸಿರುತ್ತೇನೆ. ಚೆಕ್ ಯಾವ ಕಾರಣಕ್ಕಾಗಿ ಅಮಾನ್ಯಗೊಂಡಿರುತ್ತದೆ ಎಂದು ನನಗೆ ಈಗ ನೆನಪಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರಕ್ಕೆ ನಾನೇ ಖುದ್ದು ಮಾಹಿತಿ ನೀಡಿರುತ್ತೇನೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ನಿಪಿ-1 ರ ಚೆಕ್ ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲಾ ಎಂಬ ಕಾರಣಕ್ಕೆ ಅಮಾನ್ಯಗೊಂಡಿರುತ್ತದೆ ಎಂದು ನಮೂದಿಸಿರುತ್ತೇನೆ ಎಂದರೆ ಸರಿ. ಆರೋಪಿಗೆ ಕಳುಹಿಸಿರುವ ಕಾನೂನು ತಿಳುವಳಿಕೆ ಪತ್ರವು ಆರೋಪಿಗೆ ಜಾರಿಯಾಗಿರುತ್ತದೆ, ಅದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ನಿಪಿ-7 ರಲ್ಲಿ ಆರೋಪಿಯ ಸಹಿ ಇಲ್ಲಾ ಎಂದರೆ ಸರಿ, ಸಾಕ್ಷಿ ಮುಂದುವರೆದು ನೇತ್ರಾರವರ ಸಹಿ ಇರುತ್ತದೆ ಎಂದು ನುಡಿಯುತ್ತಾರೆ.

( ಮುಂದುವರೆದ ಪಾಟೀ ಸವಾಲಿಗಾಗಿ ಸಮಯಕೋರಿದ್ದರಿಂದ ಮುಂದೂಡಲಾಯಿತು )

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.